

ಸಾಧಕನಿಗೆ ಸಹೋದರಿಯರ ಸಿಹಿಮುತ್ತು

ಭಾರತದ ಪರವಾಗಿ ಅತಿ ಹೆಚ್ಚು ರನ್ ಗಳಿಸಿದ್ದು ಗಿಲ್. ಅಭಿಷೇಕ್ ಅವರ ಆಲ್‌ರೌಂಡ್ ಸಾಮರ್ಥ್ಯವೂ ಅದೇ ಟೂರ್ನಿಯಲ್ಲಿ ಅನಾವರಣಗೊಂಡಿತು. ದಾಳಿಕೋರತನವೊಂದೇ ಸದಾ ಫಲ ಕೊಡುವುದಿಲ್ಲ. ಹೀಗಾಗಿ ಅಭಿಷೇಕ್ ಇನ್ನೂ ಭಾರತ ತಂಡದ ಪರವಾಗಿ ಆಡಲು ಬೆಂಚು ಕಾಯಬೇಕಾಗಿ ಬಂದಿದೆ.

2018ರಲ್ಲಿ ‘ಡೆಲ್ಲಿ ಕ್ಯಾಪಿಟಲ್ಸ್’ ಐಪಿಎಲ್ ತಂಡದಲ್ಲಿ ಅಭಿಷೇಕ್ ಇದ್ದರು. ಸತತವಾಗಿ ಬ್ಯಾಟಿಂಗ್ ಮಾಡುವ ಅವಕಾಶ ಆ ತಂಡದಲ್ಲಿ ಸಿಗಲಿಲ್ಲ. 2021ರಲ್ಲಿ ಎಸ್‌ಆರ್‌ಎಚ್ ತಂಡ ಈ ಪ್ರತಿಭಾವಂತನನ್ನು ತನ್ನತ್ತ ಸೆಳೆಯಿತು. ಮುಂದಿನ ಋತುವಿನಲ್ಲಿಯೇ ಇನಿಂಗ್ಸ್ ಆರಂಭಿಸುವ ಅವಕಾಶ ಕೊಟ್ಟಿತು. ಯಾಕೆಂದರೆ, ಜಾನಿ ಬೇರ್‌ಸ್ಟೊ, ಡೇವಿಡ್ ವಾರ್ನರ್ ಇಬ್ಬರೂ ಆಗ ಆ ತಂಡದಲ್ಲಿ ಇರಲಿಲ್ಲ. ಹೀಗಾಗಿ ಎಡಗೈ ಬ್ಯಾಟರ್ ಒಬ್ಬನನ್ನು ಆಡಿಸುವುದು ತಂಡಕ್ಕೆ ಅನಿವಾರ್ಯವಾಯಿತು. ಅದು ಅಭಿಷೇಕ್ ಪಾಲಿಗೆ ಚಿಮ್ಮುಹಲಗೆಯಾದದ್ದೂ ಹೌದು.

ಬರೀ ಚುಟುಕು ಕ್ರಿಕೆಟ್ ಬಗೆಗೆ ಮಾತನಾಡುವ ಕಾಲ ಇದಾಗಿಬಿಟ್ಟಿದೆ. ಅಭಿಷೇಕ್ ಕೂಡ ಈ ಕ್ರಿಕೆಟ್‌ಗೆ ಚೆನ್ನಾಗಿ ಹೊಂದಿಕೊಂಡಿದ್ದಾರೆನ್ನುವುದಕ್ಕೆ ಅವರು ಕಳೆದ ‘ಸೈಯದ್ ಮುಷ್ತಾಕ್ ಅಲಿ ಟೂರ್ನಿ’ಯಲ್ಲಿ ಪಟಪಟನೆ ರನ್ ಕಲೆಹಾಕಿದ್ದೇ ಸಾಕ್ಷಿ. 196ಕ್ಕೂ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ 485 ರನ್‌ಗಳನ್ನು ಅವರು ಗಳಿಸಿದ್ದರು. 39 ಸಿಕ್ಸರ್‌ಗಳನ್ನು, 35 ಬೌಂಡರಿಗಳನ್ನು ಹೊಡೆದಿದ್ದ ಅವರು ಆ ಟೂರ್ನಿಯಲ್ಲಿ ಎರಡು ಶತಕಗಳನ್ನೂ ಖಾತೆಗೆ ಹಾಕಿಕೊಂಡಿದ್ದರು.

‘ವಿಜಯ್ ಹಜಾರೆ ಟ್ರೋಫಿ’ ಪಂದ್ಯಗಳಲ್ಲಿ ಅದೇ ಲಯ ಮುಂದುವರಿಸಲು ಅವರಿಗೆ ಆಗಿರಲಿಲ್ಲ. ಆದರೆ, ರಣಜಿ ಟ್ರೋಫಿ ಪಂದ್ಯದಲ್ಲಿ ಕರ್ನಾಟಕದ ವಿರುದ್ಧ 91 ರನ್ ಸ್ಕೋರ್ ಮಾಡಿ, ಹಳಿಗೆ ಮರಳಿದ್ದರು.

ಈ ಸಲ ಅವರು ಎಂಟು ಪಂದ್ಯಗಳಲ್ಲಿ ಎಸ್‌ಆರ್‌ಎಚ್ ಪರವಾಗಿ ಆಡಿ, 288 ರನ್‌ಗಳನ್ನು ಗಳಿಸಿದ್ದಾರೆ. 2022ರಲ್ಲಿ 14 ಪಂದ್ಯಗಳಿಂದ 426 ರನ್ ಸೇರಿಸಿದ್ದನ್ನು ಕೂಡ ನಾವು ನೆನಪಿನಲ್ಲಿ ಇಡಬೇಕು.

‘ಡೆಲ್ಲಿ ಕ್ಯಾಪಿಟಲ್ಸ್’ ಎದುರಿನ ಪಂದ್ಯದಲ್ಲಿ ದೆಹಲಿಯಲ್ಲಿಯೇ ಆಡಿದಾಗ, ಪವರ್ ಪ್ಲೇನಲ್ಲಿ ಎಸ್‌ಆರ್‌ಎಚ್ 125 ರನ್ ದಾಟಿತ್ತು. ಕೇವಲ 12 ಎಸೆತಗಳಲ್ಲಿ ಅಭಿಷೇಕ್ 49 ರನ್ ಗಳಿಸಿದರು. 6 ಸಿಕ್ಸರ್‌ಗಳು ಹೊಮ್ಮಿದ್ದವು. ಕಳೆದ ವರ್ಷ ಯಶಸ್ವಿ ಜೈಸ್ವಾಲ್ 13 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದ ದಾಖಲೆಯನ್ನು ಇನ್ನೇನು ಮುರಿಯಬಹುದು ಎಂದುಕೊಳ್ಳುವಷ್ಟರಲ್ಲಿ ಅವರು ಔಟಾದರು.

383.33ರ ಆ ಸ್ಟ್ರೈಕ್‌ರೇಟ್ ನೋಡಿದರೆ ಎಂಥವರಿಗೂ ಮೈ ಝುಮ್ಮೆನ್ನುತ್ತದೆ. ಎಡಗೈ ಸ್ಪಿನ್ ಬೌಲಿಂಗ್ ಕೂಡ ಮಾಡುವ ಅಭಿಷೇಕ್ ಭವಿತವ್ಯ ಹೇಗಿರುವುದೋ ನೋಡಬೇಕು.

ಪ್ರತಿಕ್ರಿಯಿಸಿ: feedback@sudha.co.in




